<u>ಅಸಲು ದಾವಾ ಸಂಖ್ಯೆ:-**89/2020**</u> ಪಿ.ಡಬ್ಲ್ಯೂ:- **1**

ದಿನಾಂಕಃ **12-01-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ಪ್ರತಿವಾದಿಯು ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ನನ್ನ ಹೆಸರಿಗೆ ಸರ್ವೇ ನಂ.156 ಆಸ್ತಿಯನ್ನು ಖರೀದಿ ಮಾಡಿ ಕೊಟ್ಟಿರುತ್ತಾರೆ. ನಮ್ಮ ತಂದೆಯವರು ಸರ್ವೇ ನಂ.156 ರಲ್ಲಿ 2 ಎಕರೆ ಜಮೀನನ್ನು ಖರೀದಿ ಮಾಡುವ ಸಮಯದಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರು 1991 ನೇ ಸಾಲಿನಲ್ಲಿ ಖರೀದಿ ಮಾಡಿರುತ್ತಾರೆ. ಸರ್ವೇ ನಂ.156/2 ರ ಆಸ್ತಿಯನ್ನು ನೀವು ಖರೀದಿ ಮಾಡುವ ಪೂರ್ವದಲ್ಲಿ ಒಟ್ಟು 4 ಎಕರೆ ಜಮೀನು ಇತ್ತು ಎಂದರೆ ಗೊತ್ತಿಲ್ಲ. ಸದರಿ ಜಮೀನು ಕುಷ್ಕಿ ಜಮೀನು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.156/2 ರಲ್ಲಿ ನಾವು 2 ಎಕರೆ ಜಮೀನನ್ನು ಖರೀದಿ ಮಾಡಿದ ನಂತರ ಸರ್ವೇ ನಂ.156/2 ಮತ್ತು 156/7 ಎಂದು ಪೋಡಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.156/2 ನಮಗೆ ಸೇರಿದ ಆಸ್ತಿ ಮತ್ತು 156/7 ಆಸ್ತಿಯು ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ಸರಿ. ಸರ್ವೇ ನಂ.156/2 ರ 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಸರ್ವೇ ನಂ.156/2 ರಲ್ಲಿ ಒಟ್ಟು 4 ಎಕರೆ ಜಮೀನು ಇದ್ದು ಸದರಿ ಜಮೀನಿನಲ್ಲಿ ನಾವು 2 ಎಕರೆ ಜಮೀನನ್ನು ಖರೀದಿ ಮಾಡಿದ ನಂತರ ಸರ್ವೇ ನಂ.156/2 ರಲ್ಲಿ 2 ಎಕರೆ ಜಮೀನು ಬದಲಾವಣೆ ಆಗಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ಬದಲಾವಣೆ ಆಗಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದಿದ್ದರೂ ಸಹ

ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಸರ್ವೆ ನಂ.156/7 ರ ಆಸ್ತಿಯನ್ನು ಹದ್ದುಬಸ್ತು ಮಾಡಲು ಪ್ರತಿವಾದಿಯು ಸರ್ವೇ ಇಲಾಖೆಗೆ ಅರ್ಜಿ ಸಲ್ಲಿಸಿರುವ ಬಗ್ಗೆ ನಿಮಗೆ ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಹಾಕಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು 2020 ನೇ ಸಾಲಿನಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಅರ್ಜಿ ಸಲ್ಲಿಸಿದ ನಂತರ ಸರ್ವೇ  ಅಧಿಕಾರಿಯವರು ನನಗೆ ನೋಟೀಸನ್ನು ಜಾರಿ ಮಾಡಿ ಸರ್ವೇ ಮತ್ತು ಹದ್ದುಬಸ್ತು ಮಾಡುವ ಸಮಯದಲ್ಲಿ ಹಾಜರಿರಬೇಕೆಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಸರ್ವೇ ನಂ.156/7 ರ ಆಸ್ತಿಯನ್ನು ಹದ್ದುಬಸ್ತು ಮಾಡುವ ಸಮಯದಲ್ಲಿ ನೀವು ಮತ್ತು ನಿಮ್ಮ ಯಜಮಾನರು ಹಾಜರಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಯಜಮಾನರು ಹಾಜರಿದ್ದರು ನಾನು ಹಾಜರಿರಲಿಲ್ಲ ಎಂದು ನುಡಿಯುತ್ತಾರೆ. ಸರ್ವೇಯ ಸಮಯದಲ್ಲಿ ಸರ್ವೇ ಅಧಿಕಾರಿಗಳು ನಾವು ಸರ್ವೇ ನಂ.156/7 ರಲ್ಲಿ 5 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದೇವೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನನ್ನ ಆಸ್ತಿಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗೆ ಸೇರಿದ ಜಮೀನು ಇದೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗೆ ಸೇರಿದ ಜಮೀನು ಇದೆ. ಸರ್ವೇ ಅಧಿಕಾರಿಗಳು ನಮಗೆ ಸರ್ವೇ ನಂ.156/7 ರಲ್ಲಿ 5 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದೇವೆ ಎಂದು ತಿಳಿಸಿದ್ದರಿಂದ ನಾವು ದಾಖಲೆಗಳಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ 5 ಗುಂಟೆ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಮ್ಮ ವಿರುದ್ಧ 5 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂ.156/2 ರಲ್ಲಿ 2 ಎಕರೆ ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ ಸರ್ವೇ ನಂ.156/2 ರಲ್ಲಿ 4 ಎಕರೆ ಪ್ರತಿವಾದಿ ಮತ್ತು ಅವರ ಅಣ್ಣನ ಹೆಸರಿಗೆ ಜಂಟಿಯಾಗಿತ್ತು ಎಂದರೆ ಸರಿ. ಹನುಮಂತ ರಾವ್ ಮತ್ತು ಪ್ರತಿವಾದಿ ಸರ್ವೇ ನಂ.156/2 ರಲ್ಲಿ ವಿಭಾಗ ಮಾಡಿಕೊಂಡಿರುವ ಬಗ್ಗೆ ಮತ್ತು ಸ್ವಾಧೀನದಲ್ಲಿರುವ ಬಗ್ಗೆ ವೈಯಕ್ತಿಕ ಮಾಹಿತಿ ನಿಮಗೆ ಇಲ್ಲ ಎಂದರೆ ಸರಿಯಲ್ಲ. ಹನುಮಂತ ರಾವ್ ರವರಿಂದ ಆಸ್ತಿಯನ್ನು ಖರೀದಿ ಮಾಡುವ

ಸಮಯದಲ್ಲಿ ವಿಸ್ತೀರ್ಣ 2 ಎಕರೆ ಅಥವಾ 1 ½ ಎಕರೆ ಇತ್ತು ಎಂಬ ಬಗ್ಗೆ ಕೂಲಂಕುಷವಾಗಿ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಹನುಮಂತರಾವ್ ರವರು ನಾವು ಖರೀದಿ ಮಾಡುವ ಪೂರ್ವದಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನಾನುಭವದಲ್ಲಿದ್ದರು ಎಂದು ನಾನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.